KPFBA
Karnataka Poultry Farmers & Breeders Association


***MANAGEMENT COMMITTEE***
***FY2019-2021***

***Dr. Sushanth Rai. B***
*President*
*drsushanthrai@gmail.com*
*98450 04945*

***Mr. S.N.Raghunath***
*Vice President*
*banashankariegg@gmail.com*
*96327 77999*

***Dr. AnjanGoswami***
*General Secretary*
*dranjan@khadkeshwara.com*
*94498 71819*

***Dr. H.R. Halambi***
*Treasurer*
*hrhalambi@yahoo.com*
*99000 81303*

***Dr. Arshan Shaheed***
*MC Member & Single Window Committee Chairman*
*arshan503@yahoo.co.in*
*93430 93720*

***Mr. Prasanna***
*MC Member & Hatching Egg Committee Chairman*
*nandinipoultry@gmail.com*
*99000 09924*

***Mr. Narendra Pasuparthy***
*MC Member & IT, PR & Media Management Committee Chairman*
*Naren@nandagroup.in*
*98800 74408*

***Dr. Bhoopathi***
*MC Member*
*tobhoopathy@gmail.com*
*99001 57243*

***Mr. Vincent Cutinha***
*MC Member*
*anupamafeeds@idealchicken.in*
*96866 94301*

***Inayath Ulla Khan***
*Executive Secretary*
*ikhan@poultrykarnataka.net*
*9886730997*


28th March 2020

**ಪತ್ರಿಕಾ ಪ್ರಕಟಣೆ**

**ಕರ್ನಾಟಕ ಸರ್ಕಾರವು ಲಾಕ್ಡೌನ್ ಅವಧಿಯಲ್ಲಿ ಚಿಕನ್ ಮತ್ತು ಕೋಳಿಮೊಟ್ಟೆಯ ಸಾಗಣೆ ಮತ್ತು ಮಾರಾಟಕ್ಕೆ ಅನುಮತಿ ನೀಡಿದೆ.**

ಕರ್ನಾಟಕ ಸರ್ಕಾರವು ಶುಕ್ರವಾರ ರಾತ್ರಿ ಚಿಕನ್ ಮತ್ತು ಕೋಳಿಮೊಟ್ಟೆಯ ಸಾಗಣೆ ಮತ್ತು ಮಾರಾಟದ ಮೇಲಿನ ನಿರ್ಭಂಧವನ್ನು ತೆಗೆದುಹಾಕಿದೆ . ಈ ಮೂಲಕ ಪ್ರೋಟಿನ್ ಭರಿತ ಪೌಷ್ಠಿಕಾಂಶಯುಕ್ತ ಆಹಾರವು ಜನರಿಗೆ ಲಭ್ಯವಾಗುವಂತೆ ಮಾಡಿದೆ. ಭಾರತ ಸರ್ಕಾರವು ಘೋಷಿಸಿದ 21 ದಿನಗಳ ಲಾಕ್ಡೌಗನ್ ಹಿನ್ನೆಲೆಯಲ್ಲಿ ಪೋಲೀಸ್ ಮತ್ತು ಇತರ ಆಡಳಿತ ನಿಯಂತ್ರಣ ಸಂಸ್ಥೆಗಳು ಕೋಳಿ ಉತ್ಪನ್ನಗಳ ಸಾಗಣೆಗೆ ಅವಕಾಶ ಕೊಡುತ್ತಿರಲಿಲ್ಲ . ಇದು ಸಂಪೂರ್ಣ ಕೋಳಿ ಸಾಕಾಣಿಕಾ ಉದ್ಯಮದ ಮೇಲೆ ಮತ್ತು ಗ್ರಾಹಕರ ಮೇಲೆ ಪರಿಣಾಮವನ್ನು ಬೀರಿತ್ತು . ಕರ್ನಾಟಕ ಪೌಟ್ರಿ ಫಾರ್ಮರ್ಸ್ ಮತ್ತು ಬ್ರೀಡರ್ಸ್ ಅಸೋಸಿಯೇಶನ್ ಈ ನಿರ್ಭಂಧವನ್ನು ತೆಗೆದುಹಾಕುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು.

ಪಶು ಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಎ .ಬಿ. ಇಬ್ರಾಹಿಮ್ ಅವರು ಮಾರ್ಚ್ 27,2020 ರಂದು ಈ ಸಂಬಂಧ ಸುತ್ತೋಲೆಯೊಂದನ್ನು ಕಳಿಸಿರುತ್ತಾರೆ . ಪಶು ಸಂಗೋಪನೆಯು ಅಗತ್ಯ ಸೇವೆಯ ಅಡಿಯಲ್ಲಿ ಬರುವ ಕಾರಣ , ಲಾಕ್ಡೌನ್ ಅವಧಿಯ ಲ್ಲಿ ವಿನಾಯಿತಿ ನೀಡಲಾಗಿದೆ ಎಂದು ಈ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಭಾರತ ಸರ್ಕಾರದ ಗೃಹ ಕಾರ್ಯದರ್ಶಿಗಳು ಮತ್ತು ಕೇಂದ್ರ ಪಶು ಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯ ಜಂಟೀ ಕಾರ್ಯದರ್ಶಿಗಳ ಪತ್ರವನ್ನು ಉಲ್ಲೇಖಿಸಿ ಈ ಸುತ್ತೋಲನೆಯನ್ನು ಕಳಿಸಲಾಗಿದೆ.

ಈ ಸುತ್ತೋಲೆಯನ್ನು ರಾಜ್ಯದ ಎಲ್ಲಾ ನಗರಗಳ ಪೋಲೀಸ್ ಆಯುಕ್ತ ರಿಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಖೆಯ ಆಯುಕ್ತರಿಗೆ, ಎಲ್ಲ ಡೆಪ್ಯುಟಿ ಕಮಿಶನರ್‌ಗಳಿಗೆ, ಎಲ್ಲಾ ಪೋಲಿಸ್ ಸುಪರಿಟೆಂಡೆಂಟ್‌ಗಳಿಗೆ, ಎಲ್ಲಾ ಜಿಲ್ಲಾ ಪಂಚಾಯತದ ಕಾರ್ಯ ನಿರ್ವಹಣಾ ಅಧಿಕಾರಿಗಳಿಗೆ , ಪಶು ಸಂಗೋಪನಾ ಆಯುಕ್ತರಿಗೆ ಹಾಗೂ ಇತರ ಎಲ್ಲಾ ಸಂಬಂಧಪಟ್ಟವರಿಗೆ ಕಳಿಸಲಾಗಿದೆ. ಈ ಬಗ್ಗೆ ಸ್ಥಳೀಯವಾಗಿ ಜಾಗೃತಿ ಮೂಡಿಸುವಂತೆ ಅವರಲ್ಲಿ ಸೂಚಿಸಲಾಗಿದೆ.

ರಾಜ್ಯದ ಒಳಗೆ ಮತ್ತು ಅಂರತ್‌ರಾಜ್ಯ ಗಡಿಯಲ್ಲಿ ಕೋಳಿ ಉತ್ಪನ್ನಗಳ ಸಾಗಾಣಿಕೆಯ ಮೇಲೆ ಇಷ್ಟು ದಿನ ವಿಧಿಸಿದ್ದ ನಿರ್ಬಂಧದಿಂದ ರೈತರಿಗೆ , ಉತ್ಪಾದಕರಿಗೆ ಹಾಗೂ ಮಾರಾಟಗಾರರಿಗೆ ಬಹಳ ತೊಂದರೆಯಾಗಿತ್ತು . ಕೆ.ಪಿ.ಎಫ್.ಬಿ.ಎ. ಮತ್ತು ಇತರ ಮಾರಾಟಗಾರರು ಈ ನಿರ್ಭಂಧವನ್ನು ತೆಗೆದುಹಾಕುವಂತೆ ಪಶು ಸಂಗೋಪನಾ ಆಯುಕ್ತರಿಗೆ ಮಾರ್ಚ್ 26 ರಂದು ಮನವಿಯನ್ನು ಸಲ್ಲಿ ಸಿದ್ದರು. ಈ ಮನವಿಯನ್ನು ಪರಿಗಣಿಸಿದ ಸರ್ಕಾರವು ಈ ಸಂಬಂಧ ಸುತ್ತೋಲೆಯನ್ನು ಹೊರಡಿಸಿದೆ . ಈ ಸುತ್ತೋಲೆಯ ಪ್ರಕಾರ ಎಲ್ಲಾ ಕೋಳಿ ಸಾಕಾಣಿಕಾ ಉತ್ಪನ್ನಗಳ ಸಾಗಣೆ ಮತ್ತು ಮಾರಾಟ ಇನ್ನು ಮುಂದೆ ಸರಾಗವಾಗಿ ನಡೆಯಲು ಅನುವು ಮಾಡಿ ಕೊಟ್ಟಂತಾಗಿದೆ.

ಈ ಸುತ್ತೋಲೆಯ ಪ್ರಕಾರ ಕೋಳಿ ಪಕ್ಷಿಗಳು, ಕುರಿ, ಮೇಕೆ, ಹಂದಿ ಇತ್ಯಾದಿಗಳನ್ನು ಫಾರ್ಮ್‌ಗಳಲ್ಲಿ ಸಾಕಾಣಿಕೆ ಮಾಡಲು ಅನುಮತಿ ನೀಡಲಾಗಿದೆ . ಜೊತೆಗೆ, ಜೀವಂತ ಕೋಳಿಗಳು, ಒಂದು ದಿನದ ಕೋಳಿ ಮರಿಗಳು , ಕುರಿ, ಮೆಕೆ, ಮಿನು, ಹಂದಿ, ಚಿಕನ್, ಹ್ಯಾಚಿಂಗ್ ಎಗ್, ಟೆಬಲ್ ಎಗ್, ತಯಾರಿಸಿದ ಕೋಳಿ ಆಹಾರ, ಕೋಳಿ ಆಹಾರ ತಯಾರಿಕೆಯಲ್ಲಿ ಬಳಸುವ ಕಚ್ಚಾ ವಸ್ತುಗಳು, ಪಶು ಸಂಗೋಪನೆಯಲ್ಲಿ ಉಪಯೋಗಿಸಲು ಲಿಕ್ವಿಡ್ ನೈಟ್ರೋಜನ್, ಇತ್ಯಾದಿ ಪಶು ಸಂಗೋಪನೆಗೆ ಸಂಬಂಧಿಸಿದ ಸಾಮಗ್ರಿಗಳ ಸಾಗಣೆಗೆ ಅನುಮತಿ ನೀಡಲಾಗಿದೆ.


*#45, 2nd Floor, 5th Cross, Vasanthnagar, Bangalore – 560052 | www.poultrykarnataka.net*

28th March 2020

ಸಂಕಷ್ಟದ ದಿನಗಳನ್ನು ಎದುರಿಸುತ್ತಿರುವ ಕೋಳಿ ಸಾಕಾಣಿಕಾ ವಲಯಕ್ಕೆ ಇದರಿಂದ ಬಹಳ ಅನುಕೂಲವಾಗಲಿದೆ ಎಂದು ಕೆ.ಪಿ.ಎಫ್.ಬಿ.ಎ. ಅಧ್ಯಕ್ಷರಾದ ಡಾ.ಸುಶಾಂತ್ ರೈ ರಾಜ್ಯಸರ್ಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ . ಈ ನಿರ್ಧಾರದಿಂದ ಕೋಳಿ ಸಾಕಾಣಿಕಾ ವಲಯಕ್ಕೆ ಬಹಳ ದೊಡ್ಡ ನೆಮ್ಮದಿ ದೊರಕಿದಂತಾಗಿದೆ ಹಾಗೂ ಗ್ರಾಹಕರಿಗೆ ಪೌಷ್ಠಿಕಾಂಶಯುಕ್ತ ಆಹಾರ ದೊರಕಿದಂತಾಗಿದೆ ಎಂದು ಅವರು ತಿಳಿಸಿದ್ದಾರೆ

-----

ಹೆಚ್ಚಿನ ಮಾಹಿತಿಗಾಗಿ : ಇನಾಯತ್ ಉಲ್ಲಾ ಖಾನ್ - 9886730997/ ikhan@poultrykarnatake.net